(5) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ನೌಕರರ ಮೇಲೆ ದಬ್ಬಾಳಿಕೆ.

ಶ್ರೀ ಬಾಬುರೆಡ್ಡಿ ತುಂಗಳಿ.—ಅಧ್ಯಕ್ಷರೆ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ಜುಲೈ ತಿಂಗಳು ಮುಗಿದು ಮೇಲೆ ಅಲ್ಲಿಯ ನೌಕರರನ್ನು ಸಾಮೂಹಿಕವಾಗಿ ವರ್ಗಾವಣೆ ಮಾಡುತ್ತಿರುವ ಬಗ್ಗೆ ಮತ್ತು ಅಲ್ಲಿಯ ನೌಕರರ ಮೇಲೆ ಸತತವಾಗಿ ನಡೆಯುತ್ತಿರುವ ದಬ್ಬಾಳಿಕೆಯ ಬಗ್ಗೆ ಮಾನ್ಯ ಮಂತ್ರಿಗಳಾದ ದೇಶಪಾಂಡೆಯವರ ಗಮನವನ್ನು ಈ ಸಂದರ್ಭದಲ್ಲಿ ಸೆಳೆಯಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳ ಹಾಜರಿಲ್ಲದಿರುವುದರಿಂದ ಅವರ ಗಮನಕ್ಕೆ ತರುತ್ತೇವೆಂದು ಹಾಜರಿದ್ದ ಮಂತ್ರಿಗಳು ತಿಳಿಸಬಹುದು.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೆ, ನಿನ್ನೆಯಿಂದ ಸರ್ಕಾರದ ಪರವಾಗಿ ಮಂತ್ರಿಗಳಿಗೆ ಹೇಳಿ ಕೊಡುತ್ತಿದ್ದೀರಿ. ಅವರಿಗೆ ಅದು ಗೊತ್ತಿಲ್ಲವೇ ? ಈಗ ತಮ್ಮಿಂದ ಟ್ರೈನಿಂಗ್ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ ಈ ಸರ್ಕಾರಕ್ಕೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾನು ಮಾನ್ಯ ಕೃಷ್ಣನ್‌ರವರ ಪರವಾಗಿ ಹೇಳುತ್ತೇನೆ. ತಾವೂ ಕೇಳಿ, ಕೇಳಿ, ಬೇಜಾರಾಗಿ ಹೇಳಿದ್ದೀರಾ ಎಂದು ಕಾಣುತ್ತದೆ.

ಅಧ್ಯಕ್ಷರು.—ದಯಮಾಡಿ ಮಾನ್ಯ ಬಂಗಾರಪ್ಪನವರು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಸಂತೋಷವಾಗಿದೆಯೇ ?

ಅಧ್ಯಕ್ಷರು.—ನಿಮ್ಮ ಸಂತೋಷವೇ, ನಮ್ಮ ಸಂತೋಷ.

ಶ್ರೀ ಎಸ್. ಬಂಗಾರಪ್ಪ.—ಈಗ ಸಚಿವರು ಇಲ್ಲ ಅಂದರೆ ಮತ್ತೊಂದು ಸಾರಿ ಉತ್ತರ ಕೊಡಲಿ. ಆದರೆ ಇದನ್ನು ಹಗುರವಾಗಿ ತೆಗೆದುಕೊಳ್ಳುವುದು ಬೇಡ.

ಅಧ್ಯಕ್ಷರು.—ಸದನದಲ್ಲಿ ತರತಕ್ಕ ಎಲ್ಲ ವಿಷಯಗಳ ಬಗ್ಗೆ ಗಮನಹರಿಸಲಿಕ್ಕೆ ನಾನು ಹೇಳಿದ್ದೇನೆ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ನಾನು ಈ ಬಗ್ಗೆ ಸಣ್ಣ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ತಂದು ಆದಷ್ಟು ಬೇಗ ಪರಿಹಾರ ಕಂಡುಹಿಡಿಯಲಿಕ್ಕೆ ಹೇಳುತ್ತೇನೆ.

(6) ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿದಾಗ ಚಾಕು ಹೊಟ್ಟೆಯಲ್ಲಿ ಉಳಿದಿರುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್ (ಹೊಸ ನಗರ).—ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾದ ಮಹಿಳೆಯೋರ್ವಳ ಹೊಟ್ಟೆಯಲ್ಲಿ ಚಾಕು ಉಳಿದು ಹೋದ ಬಗ್ಗೆ ಜುಲೈ 23ರ ಪ್ರಜಾವಾಣಿಯ ಮುಖಪುಟದಲ್ಲಿ ವರದಿ ಆಗಿದೆ. ಈ ಕುರಿತು ಸರಕಾರದ ಕ್ರಮಕ್ಕಾಗಿ ಗಮನ ಸೆಳೆಯಲು ಅವಕಾಶ ಕೋರುತ್ತೇನೆ. ಅಧ್ಯಕ್ಷರೆ, ನಿನ್ನೆ ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಬಂದಿರುವ ಪ್ರಕಾರ ಆ ಮಹಿಳೆಗೆ ಆಪರೇಷನ್ ಮಾಡಿದಾಗ ಚಾಕು ಒಳಗೆ ಉಳಿದು ಹೋಗಿದ್ದು ಆನಂತರ ಆಕೆ ಎರಡನೆಯ ಸಾರಿ ಆಪರೇಷನ್ ಮಾಡಿಸಿಕೊಂಡು ಜೀವ ಉಳಿಸಿಕೊಂಡು ಬಂದ ಪ್ರಕಾರಣದ ಬಗ್ಗೆ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬಂದಿದೆ, 15–20 ದಿವಸಗಳ ಹಿಂದೆ ಒಂದು ವಾರ ಪತ್ರಿಕೆಯಲ್ಲಿ ಬೇರೆ ಶಬ್ದಗಳಲ್ಲಿ ಬರೆದು ಸರ್ಕಾರದ ಗಮನವನ್ನು, ಮಂತ್ರಿಗಳ ಗಮನವನ್ನು ಸೆಳೆದಿದ್ದರು. ಇದೇ ರೀತಿ ರಾಜ್ಯದಲ್ಲಿರತಕ್ಕ ಅನೇಕ ಆಸ್ಪತ್ರೆಗಳಲ್ಲೂ ಸಹ.....

ಅಧ್ಯಕ್ಷರು.—ಈಗ ಭಾಷಣ ಬೇಡ. ರೂಲ್ಸ್ ಅಂಡ್ ರೆಗ್ಯುಲೇಷನ್ ನೋಡಿಕೊಳ್ಳಬೇಕು. ಚಿತ್ರದುರ್ಗ ಆಸ್ಪತ್ರೆಯ ವಿಷಯ ಮಾತ್ರ ಹೇಳಿ,

ಶ್ರೀ ಬಿ. ಸ್ವಾಮಿರಾವ್ —ಅಧ್ಯಕ್ಷರೆ, ಈಗ ಆರೋಗ್ಯ ಮಂತ್ರಿಗಳು ಇಲ್ಲ. ಯಥಾ ಪ್ರಕಾರ ರಾಚಯ್ಯನವರೇ ಉತ್ತರ ಹೇಳಬೇಕಾಗಿದೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).— ಅಧ್ಯಕ್ಷರೆ, ಅದನ್ನು ಪೋಲೀಸ್ ರಿಪೋರ್ಟ್‌ನಲ್ಲಿ ಓದಿದ್ದೇನೆ. ಚಿತ್ರದುರ್ಗ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿದಂಥ ಕಾಲದಲ್ಲಿ ಚಾಕು ಹೊಟ್ಟೆಯಲ್ಲಿ ಉಳಿದಿದ್ದು, ಆನಂತರ ಮತ್ತೆ ಹೊಟ್ಟೆನೋವು ಬಂದಾಗ ಆಪರೇಷನ್ ಮಾಡಿಸಿದ್ದಾರೆ. ಯಾರು ಈ ಕೆಲಸ ಮಾಡಿದರು ಆ ಬಗ್ಗೆ ವಿಚಾರಣೆ ಮಾಡಲಿಕ್ಕೆ ಹೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ.....

ಅಧ್ಯಕ್ಷರು.—ಇದರ ಮೇಲೆ ಮತ್ತೆ ಡಿಸ್‌ಕಷನ್ ಬೇಡ.